# ಎತ್ತಿಕೊಳ್ಳೆ ಗೋಪೀ ರಂಗನ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 28
2. **Note:** This song is not available in other standard books that I referred.

ರಾಗ: ಮೋಹನ ತಾಳ: ಅಟ

ಎತ್ತಿಕೊಳ್ಳೆ ಗೋಪೀ ರಂಗನ
ರಚ್ಚೆಮಾಧವರಾಯ ನಿಲುವನಲ್ಲ || ಪ ||

ಕರ್ಣದ ಮಾಗಾಯಿ ಕದಪಲಿ ಹೊಳೆಯುತ
ಎಣ್ಣೆಮಣಿಯು ಕೊರಳಲಿ ಹುಲಿಯುಗುರು
ಚಿನ್ನದ ಬಾಯೊಳು ಅಮೃತವ ಸುರಿಯುತ್ತ
ಬೆಣ್ಣೆ-ಹಾಲನುಂಬುವೆನೆಂದು ಬಂದ || 1 ||

ಅಂಬೆಗಾಲಿಕ್ಕುತ ತುಂಬಿಯೊಲ್ ಮೊರೆಯುತ
[ಚೆಂದದ] ಅರಳೆಲೆ ನಲಿದಾಡುತ
ಬಂದು ಸರಳನಂದದಿ ಬಾಯ ಬಿಡುತ ಮು-
ಕುಂದನು ಮೊಲೆಯನುಂಬುವೆನೆಂದು ಬಂದ || 2 ||

ಬಿಗಿದ ಪಟ್ಟೆಯಲಿ ಬಾಯ್‌ತಲೆಯು ಹೊಳೆಯುತಿರೆ
ಚಿಗುಟುತ ಎಡದ ಕೈಯಲಿ ಕುಚವ
ನಗುತ ನಾಚುತ ಗೋಪಿಯ ಮುಖ ನೋಡುತ
ಮಿಗೆ ನಲಿನಲಿದುಂಡ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬಾಲಕೃಷ್ಣನನ್ನು ಎತ್ತಿಕೊಂಡು ಹೋದ ಒಬ್ಬ ಗೋಪಸ್ತ್ರೀಯು, ಯಶೋದೆಯ ಬಳಿಗೆ ಬಂದು 'ಈ ತುಂಟನನ್ನು ನೀನೇ ಎತ್ತಿಕೊಳ್ಳಮ್ಮ' ಎಂದು ಒಪ್ಪಿಸಿದಂತೆ ದಾಸರು ಈ ಹಾಡಿನಲ್ಲಿ ಹೇಳಿದ್ದಾರೆ.

**ರಚ್ಚೆ** = ಗಲಾಟೆಯ, ಹಠಮಾರಿಯ

**ಕದಪು** = ಗಲ್ಲ

**ಎಣ್ಣೆಮಣಿ** = ಮುಂಗೈಗೆ ಕಟ್ಟಿದ ಮಣಿಯ ಸರ

**ತುಂಬಿ** = ಜೇನು ಹುಳು

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, gopi, ranga, Madhava, kivi, bangara, bayi, amruta, benne, halu, mukunda, nage, nachike, yashode, jenu,
**Pravachana:** NA
**Explanation:** NA